# ಕನ್ನಡಕ್ಕೆ ಮತ್ತೆ ಬಂದ ಜಿಂಕೆಮರಿ

‘ನಂದಾ ಲವ್ಸ್ ನಂದಿತಾ’ ಕನ್ನಡ ಸಿನಿಮಾ ಮೂಲಕ ‘ಜಿಂಕೆಮರಿ’ ಎಂದೇ ಫೇಮಸ್ ಆದ ನಟಿ ನಂದಿತಾ ಶ್ವೇತಾ, ಹಲವು ವರ್ಷಗಳ ನಂತರ ಕನ್ನಡ ಸಿನಿಮಾರಂಗಕ್ಕೆ ಮರಳಿದ್ದಾರೆ. ‘ಬೆನ್ನಿ’ ಮೂಲಕ ರೀ ಎಂಟ್ರಿ ಕೊಡುತ್ತಿದ್ದು, ತಮ್ಮ ಸಿನಿಮಾ ಜೀವನದ ಕುರಿತು ‘ಸುಧಾ’ದೊಂದಿಗೆ ಮಾತನಾಡಿದ್ದಾರೆ.

■ ಸುಮಲತಾ ಎನ್.



◆ **ಹಲವು ವರ್ಷಗಳ ನಂತರ ಕನ್ನಡ ಸಿನಿಮಾರಂಗಕ್ಕೆ ಮರಳಿದ್ದೀರಿ. ಕಮ್ ಬ್ಯಾಕ್ ಹೇಗಿರಲಿದೆ?**

ತುಂಬಾ ಉತ್ಸುಕಳಾಗಿದ್ದೇನೆ. ನಾನು ಕನ್ನಡದವಳು. ಕನ್ನಡ ಸಿನಿಮಾಗೆ ವಾಪಸ್ ಬರುತ್ತಿರುವುದು ಸಹಜವಾಗಿಯೇ ಖುಷಿಯಾಗಿದೆ. ಇಷ್ಟು ವರ್ಷಗಳ ಕಾಲ ಬೇರೆ ಸಿನಿಮಾರಂಗಗಳಲ್ಲಿ ಕೆಲಸ ಮಾಡಿದ್ದೇನೆ. ನಮ್ಮಲ್ಲಿಯೂ ಸಿನಿಮಾ ಮಾಡಬೇಕು ಎಂದು ಆಗಾಗ ಅನ್ನಿಸುತ್ತಿತ್ತು. ಅದಕ್ಕೆ ಸಾಲಿಡ್ ಸ್ಕ್ರಿಪ್ಟ್ ಬೇಕು ಎಂದು ಬಯಸಿದ್ದೆ. ಈಗ ಆ ಸಮಯ ಬಂದಿದೆ.

◆ **ಕನ್ನಡಕ್ಕೆ ವಾಪಸ್ಸಾಗಲು ಹೆಚ್ಚು ಸಮಯ ಹಿಡಿಯಿತು ಅನ್ನಿಸುತ್ತಿಲ್ಲವೇ?**

ಈ ಪ್ರಶ್ನೆಯನ್ನು ಸಿನಿಮಾರಂಗದವರನ್ನೇ ಕೇಳಬೇಕು. ಮೊದಲು ಕನ್ನಡದಲ್ಲಿ ಸಿನಿಮಾ ಮಾಡಿದ ಮೇಲೆ ಬೇರೆ ಭಾಷೆಗಳಲ್ಲಿ ತೊಡಗಿಕೊಂಡೆ. ನಿರಂತರವಾಗಿ ಸಿನಿಮಾಗಳನ್ನು ಮಾಡಿದೆ. ತಮಿಳು, ತೆಲುಗು ಭಾಷೆಗಳಲ್ಲಿ ಸುಮಾರು ನಲವತ್ತರಿಂದ ನಲವತ್ತೆರಡು ಸಿನಿಮಾಗಳನ್ನು ಮಾಡಿದ್ದೇನೆ. ನಾನಿರುವುದು ಬೆಂಗಳೂರಿನಲ್ಲಿಯೇ. ಕೆಲಸ ಇದ್ದರೆ ಮಾತ್ರ ಬೇರೆ ಕಡೆಗೆ ಹೋಗಿ ಬರುತ್ತೇನೆ. ಸಿನಿಮಾದಲ್ಲಿ ಮಾಡಲು ಒಳ್ಳೆಯ ಅವಕಾಶಗಳು ಬಹಳ ಮುಖ್ಯ.

◆ **‘ಬೆನ್ನಿ’ ಸಿನಿಮಾ ಹಾಗೂ ಅದರಲ್ಲಿ ನಿಮ್ಮ ಪಾತ್ರದ ಮಹತ್ವದ ಬಗ್ಗೆ ಹೇಳಿ?**

‘ಬೆನ್ನಿ’ ಟೈಟಲ್ ರೋಲ್ ನನ್ನದು. ಭಾವನಾತ್ಮಕ ಪಾತ್ರ. ಮಹಿಳಾ ಕೇಂದ್ರಿತ ಸಿನಿಮಾ. ಸಾಮಾನ್ಯ ಹುಡುಗಿಯ ಜೀವನದಲ್ಲಿ ನಡೆಯುವಂಥ ಕೆಲವು ವಿಚಾರಗಳನ್ನು ಇಟ್ಟುಕೊಂಡು ಆಕೆಯ ಜೀವನವನ್ನು, ಆಕೆ ಪಡುವ ಕಷ್ಟಗಳನ್ನು, ಅದನ್ನು ಎದುರಿಸುವ ರೀತಿಯನ್ನು ಸಿನಿಮಾದ ಕೇಂದ್ರಬಿಂದುವಾಗಿಸಲಾಗಿದೆ. ಹೀಗಾಗಿ ಕಥೆ ಇಷ್ಟವಾಯಿತು. ಫೈಟ್‌ಗಳಿವೆ. ತುಂಬಾ ರಾ ಆಗಿ ಫೈಟ್ ದೃಶ್ಯಗಳನ್ನು ತೋರಿಸಲಾಗಿದೆ.

ಪ್ರಸ್ತುತ ಮಹಿಳಾ ಪ್ರಧಾನ ಸಿನಿಮಾಗಳ ಸಂಖ್ಯೆ ಕಡಿಮೆಯಿದೆ. ಹೀಗಾಗಿ ಒಂದೊಳ್ಳೆಯ ಪ್ರಾಜೆಕ್ಟ್‌ನೊಂದಿಗೆ ಕನ್ನಡಕ್ಕೆ ಮರಳಬೇಕು ಎಂಬ ಆಸೆಯನ್ನು ಈ ಸಿನಿಮಾ ಪೂರೈಸಿದೆ. ನಿರ್ದೇಶಕ ಶ್ರೀಲೇಶ್ ಎಸ್. ನಾಯರ್ ಅವರ ಸಿನಿಮಾ ನೋಡಿದ್ದೆ. ಅವರ ಮೇಕಿಂಗ್ ತುಂಬಾ ಚೆನ್ನಾಗಿತ್ತು. ಹೀಗಾಗಿ ಸಿನಿಮಾಗೆ ಒಪ್ಪಿಕೊಂಡೆ.

◆ **‘ಬೆನ್ನಿ’ ಸಿನಿಮಾದಿಂದ ಪ್ರೇಕ್ಷಕರು ಏನನ್ನು ನಿರೀಕ್ಷಿಸಬಹುದು?**

ಈ ಸಿನಿಮಾ ಖಂಡಿತ ಪ್ರೇಕ್ಷಕರಿಗೆ ಅಚ್ಚರಿ ಎನಿಸುತ್ತದೆ. ನನ್ನ ಪಾತ್ರ ಮಾತ್ರವಲ್ಲ, ಸಿನಿಮಾದ ಇತರೆ ಸ್ಟಾರ್ ಕಾಸ್ಟ್ ಕೂಡ ತುಂಬಾ ಚೆನ್ನಾಗಿದೆ. ಅನುಭವಿ ಕಲಾವಿದರು ಇದ್ದಾರೆ. 90 ದಿನಗಳ ಕಾಲ ಚಿತ್ರೀಕರಣ ನಡೆಯುತ್ತಿದೆ. ಮಹಿಳಾ ಪ್ರಧಾನ ಸಿನಿಮಾ ಎಂದಾಕ್ಷಣ ಬಜೆಟ್ ಕಡಿಮೆ ಎಂದೆಲ್ಲ ಊಹೆಗಳಿರುತ್ತವೆ. ಆದರೆ ಯಾವ ರೀತಿ ಸಿನಿಮಾವನ್ನು ಕಮರ್ಷಿಯಲ್ ಆಗಿ ತೆಗೆದುಕೊಂಡು ಹೋಗಬೇಕೋ ಹಾಗೇ ಪ್ಲಾನ್ ಮಾಡಿದ್ದಾರೆ.